ಸೃಜನಶೀಲತೆಗಳನ್ನು ಒಂದಾಗಿಸಿಕೊಂಡ ವ್ಯಕ್ತಿತ್ವವಾಗಿ ವಿಕಾಸ ಹೊಂದಿ ಇತಿಹಾಸವಾದರು. ಆತ್ಮವಂಚನೆಯಿಲ್ಲದೆ ಬದುಕುತ್ತ, ಅನ್ಯರ ವಂಚನೆಗಳನ್ನು ಖಂಡಿಸುತ್ತ ಖಂಡಿತವಾದಿಯಾದರು. ಸಾಮಾಜಿಕ ಕ್ರಿಯಾಶೀಲತೆಯತ್ತ ದೊಡ್ಡಪ್ರಮಾಣದಲ್ಲಿ ಸಾಗಿದ ಮೊದಲ ನವ್ಯ ಸಾಹಿತಿ ಎಂದರೆ 'ಚಂಪಾ' ಎಂಬುದು ನನ್ನ ಅಭಿಪ್ರಾಯ, ನಿಜ; ಬಹಳ ಹಿಂದೆಯೇ ಕವಿ ಗೋಪಾಲಕೃಷ್ಣ ಅಡಿಗರು ರಾಜಕೀಯ ಪ್ರವೇಶ ಮಾಡಿ 'ಜನಸಂಘ' (ಇಂದಿನ ಬಿ.ಜೆ.ಪಿ.ಯ ಮೂಲ) ಪಕ್ಷದಿಂದ ಲೋಕಸಭೆಗೆ ಸ್ಪರ್ಧಿಸಿದ್ದರು; ಸೋತರು. ಆದರೆ, ಅವರದು ನವ್ಯ ಸಾಹಿತಿಯೊಬ್ಬರ ರಾಜಕೀಯ ಪ್ರವೇಶ. ತಮ್ಮ ಕಾವ್ಯದಲ್ಲೂ ಅಡಿಗರು ಸಾಮಾಜಿಕ–ರಾಜಕೀಯ ವಸ್ತುಗಳನ್ನು ನಿರ್ವಹಿಸಿದ್ದು ನಿಜ. ಆದರೆ, ಚಂಪಾ ಅವರು ಒಬ್ಬ ಕ್ರಿಯಾಕರ್ತರಾಗಿ (**activist**) ಸಾಮಾಜಿಕ ವಲಯವನ್ನು ಪ್ರಖರವಾಗಿ ಪ್ರವೇಶಿಸಿದ, ಪ್ರೇರೇಪಿಸಿದ ಪ್ರಮುಖ ನವ್ಯ ಸಾಹಿತಿ. ಹೀಗೆ ತಾವಿದ್ದ ಕಡೆಯೇ ಭಿನ್ನ ಹಾಗೂ ವಿಭಿನ್ನವಾಗಿ ವರ್ತಿಸಿ ಅದಕ್ಕೊಂದು ಕ್ರಿಯಾರೂಪ ಕೊಡುವುದು ಚಂಪಾ ಅವರ ಸ್ವತಂತ್ರ ವ್ಯಕ್ತಿತ್ವದ ಒಂದು ವಿಧಾನ. (ಪಿ. ಲಂಕೇಶ್ ಅವರು ಅನಂತರ ರಾಜಕೀಯ ಉದ್ದೇಶದ 'ಪ್ರಗತಿರಂಗ' ಸ್ಥಾಪಿಸಿದ್ದು ಇಲ್ಲಿ ಉಲ್ಲೇಖನೀಯ).

ಚಂಪಾ ಅವರದು ಮೀರುವ ಮನೋಧರ್ಮ. ಬಂಡಾಯ ಸಾಹಿತ್ಯ ಸಂಘಟನೆಯ ವಿಷಯದಲ್ಲೂ ಇವರು ಹೀಗೆಯೇ ಇದ್ದರು. ಆರಂಭದಿಂದಲೂ ಬಂಡಾಯ ಸಾಹಿತ್ಯ ಸಂಘಟನೆಯ ಅವಿಭಾಜ್ಯ ಅಂಗವಾಗಿದ್ದ 'ಚಂಪಾ' ಅವರು ಒಮ್ಮೆ ನಮ್ಮ ಸಂಘಟನೆಯನ್ನು ಬಿಟ್ಟು ಹೊರಹೋಗಿ, ಮತ್ತೆ ಒಳ ಬಂದಿದ್ದುಂಟು. ಅದು ಕನ್ನಡ ಹೋರಾಟಕ್ಕೆ ಸಂಬಂಧಿಸಿದ ವಿಷಯ. ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ಅಂದಿನ ಕನ್ನಡ ಹೋರಾಟದ ಸ್ವರೂಪ ಮತ್ತು ಅಲ್ಲಿನ ಸಾಮಾಜಿಕ ನಾಯಕತ್ವ ಕುರಿತು ಕೆಲವರಿಗೆ ಭಿನ್ನಾಭಿಪ್ರಾಯಗಳಿದ್ದವು. ಆಗ ಚಂಪಾ ಅವರು ಬಂಡಾಯ ಸಂಘಟನೆ ಜೊತೆ ಭಿನ್ನಾಭಿಪ್ರಾಯ ಹೊಂದಿ ತಾವಾಗಿಯೇ ಬಿಟ್ಟು ಹೋದರು. ಆದರೆ, ನಾವು ಅವರನ್ನು ಬಿಡಲಿಲ್ಲ. ಮತ್ತೆ ಬಂದರು, ಕಡೆವರೆಗೂ ಒಂದಾಗಿದ್ದರು.

ಚಂಪಾ ಅವರು ಯಾವುದೇ ಸಂಘಟನೆಯಲ್ಲಿರಲಿ, ಕನ್ನಡ ಅವರ ಆದ್ಯತೆಯಾಗಿತ್ತು. ಕನ್ನಡದ ವಿಷಯ ಬಂದಾಗ ತಮ್ಮ ನಿಲುವಿಗೇ ಗಟ್ಟಿಯಾಗಿ ಬದ್ಧವಾಗಿ ದಿಟ್ಟದನಿಯಾಗುತ್ತಿದ್ದರು. ಆಗ ಅವರು ಗುರುತಿಸಿಕೊಂಡ ಸಂಘಟನೆಗಳ 'ಶಿಸ್ತು' ಗೌಣವೆಂದೇ ಭಾವಿಸುತ್ತಿದ್ದರು. ತಮ್ಮ ಆಲೋಚನಾ ವಿಧಾನದ ಕನ್ನಡಪರತೆಯೇ ಅವರ ಆದಿ ಮತ್ತು ಅಂತಿಮ ಶಿಸ್ತು. ಹೀಗಾಗಿ, ಅವರನ್ನು 'ಕನ್ನಡದ ಶಿಸ್ತಿನ ಸಿಪಾಯಿ' ಎಂದು ಸಾಂಪ್ರದಾಯಿಕ ಸಂಬೋಧನೆಯ ಮೂಲಕ ಗುರುತಿಸಲು ಸಾಧ್ಯ. ಆದರೆ, ಸಾಂಪ್ರದಾಯಿಕತೆ ಚಂಪಾ ಅವರ ನಡೆ–ನುಡಿಯಲ್ಲಿ ಎಂದೂ ಇರಲಿಲ್ಲ. ಜಡತೆಯನ್ನು ಮೀರಿದ ಚಲನೆಯೇ ಅವರ ಬದುಕಿನ ಸತ್ವವಾಗಿತ್ತು. ಈ ಚಲನೆಯು ಕಾಣದ್ದನ್ನು ಕಂಡುಕೊಳ್ಳುವ ಹುಡುಕಾಟವಲ್ಲ, ಕಂಡದನ್ನು ಕರಗತಮಾಡಿಕೊಳ್ಳುವ ಹಂಬಲದಿಂದ ಮಾಡಿದ ಮುಂದಡಿಯ ಚಲನೆಯಾಗಿತ್ತು. ಹೀಗಾಗಿ, ಚಂಪಾ ಅವರ 'ಕನ್ನಡ'ವು ಪ್ರಾದೇಶಿಕ ಪಕ್ಷದತ್ತ ಹೋಗುವ, ಕಟ್ಟುವ ಚಿಂತನೆಯ ಚಲನೆಯಾಗಿ ರೂಪುಗೊಂಡು ಪ್ರಬಲ ಪ್ರತಿಪಾದನೆಯಾಗಿ ಹೊರಹೊಮ್ಮಿತ್ತು. ಪ್ರಾದೇಶಿಕ ಪಕ್ಷದಿಂದಲೇ ರಾಜ್ಯದ ಅಭಿವೃದ್ಧಿ ಸಾಧ್ಯವೆಂದು ಅವರ 'ಅಚಲ' ನಂಬಿಕೆಯ 'ಚಲನೆ ಸ್ಥಿರ'ವಾಗಿ ಬಿಟ್ಟಿತ್ತು. ಅದಕ್ಕಾಗಿ ಅವರು ಎಂಥ ಸಾಹಸಕ್ಕೂ ಸಿದ್ಧವಾಗಿದ್ದರು. ಹೀಗಾಗಿ ಬಿ.ಜೆ.ಪಿ.ಯನ್ನು ಬಿಟ್ಟ ಶ್ರೀ ಯಡಿಯೂರಪ್ಪನವರ ಕೆ.ಜೆ.ಪಿ.(ಕರ್ನಾಟಕ ಜನತಾ ಪಕ್ಷ)ಯನ್ನು ಸೇರಿಬಿಟ್ಟರು. ಮತ್ತೆ ಹಿಂಚಲನೆಯಿಂದ ಹೊರಬಂದರು. (ಯಡಿಯೂರಪ್ಪನವರು ಮತ್ತೆ ಬಿ.ಜೆ.ಪಿ.ಗೆ ಹೋಗಿದ್ದರು) ತಾವು ಕಟ್ಟಿದ ಸ್ವಾಭಿಮಾನಿ ಕನ್ನಡ ವೇದಿಕೆಯ ವತಿಯಿಂದ ಬೆಂಗಳೂರಿನ ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರಕ್ಕೆ ಸ್ಪರ್ಧಾಳುವಾದರು! ನಿರೀಕ್ಷೆಯಂತೆ ಚೆನ್ನಾಗಿ ಸೋತರು!